**ಸಾಕ್ಷಿಗೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆ: ವಾದಿ ಪರವಾಗಿ ಶ್ರೀ ಡಿ.ಹೆಚ್.ಜೆ. ವಕೀಲರಿಂದ:**

ನಾನು ನ್ಯಾಯಾಲಯವು ರಚಿಸಿರುವ ಪ್ರಾಥಮಿಕ ವಿವಾದಾಂಶದ ಸಂಬಂಧ ನನ್ನ ಮುಖ್ಯ ವಿಚಾರಣೆಯ ಬದಲಿಗೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿರುವ ಸಂಗತಿಗಳು ಸತ್ಯವಾಗಿದ್ದು, ಅದನ್ನು ನಾನೇ ನಮ್ಮ ವಕೀಲರಿಗೆ ಹೇಳಿ ಬರೆಸಿರುತ್ತೇನೆ.

ಪ್ರಾಥಮಿಕ ವಿವಾದಾಂಶಕ್ಕೆ ಪೂರಕವಾಗಿ ನಾನು ಉಪ-ನೋಂದಣಾಧಿಕಾರಿ, ಚಿಂಚೋಳಿರವರು ವಿತರಿಸಿರುವ ಮೌಲ್ಯಮಾಪನ ಪ್ರಮಾಣ ಪತ್ರವನ್ನು ಹಾಜರು ಪಡಿಸಿದ್ದು ಅದನ್ನು ನಿಶಾನೆಯಾಗಿ ಗುರುತಿಸಲು ಕೋರುತ್ತೇನೆ. ಸಾಕ್ಷಿ ಹಾಜರು ಪಡಿಸಿದ ದಾಖಲೆಯನ್ನು ನಿಪಿ-1 ಎಂದು ಗುರುತಿಸಲಾಯಿತು.

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಹಾಗೂ ನಾನು ಹಾಜರುಪಡಿಸಿದ ದಾಖಲೆಗಳನ್ನು ಪರಿಗಣಿಸಿ ಪ್ರಾಥಮಿಕ ವಿವಾದಾಂಶವನ್ನು ನನ್ನ ಪರವಾಗಿ ನಿರ್ಧರಿಸಬೇಕಾಗಿ ಪ್ರಾರ್ಥನೆ.

**ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಜೆ.ಪಿ.ಎ. ವಕೀಲರಿಂದ:**

ದಾವಾ ಸರ್ವೆ ನಂಬರ 90 ರಲ್ಲಿನ ಕೆಲವು ಹಿಸ್ಸಾಗಳು ಶಾದಿಪೂರ ಕೆರೆಯಲ್ಲಿ ಮುಳುಗಡೆಯಾಗಿದೆ ಎನ್ನುವುದು ಸರಿ. ದಾವಾ ಸ್ವತ್ತಾದ ಸ.ನಂ.90/10 ರ ಜಮೀನು ಸಹ ಮುಳುಗಿದೆಯೇ ಎಂಬ ಪ್ರಶ್ನೆಗೆ ಸಾಕ್ಷಿ ಮುಳುಗಡೆಯಾಗಿದೆ ಎನ್ನುತ್ತಾರೆ. ಸದರಿ ಮುಳುಗಡೆಯಾದ ಜಮೀನಿನ ಮಾಲೀಕರಿಗೆ ಎಕರೆಗೆ ತಲಾ ರೂ.5 ಲಕ್ಷಕಿಂತ ಹೆಚ್ಚಿನ ಪರಿಹಾರ ಕೊಡುವಂತೆ ಭೂ-ಸ್ವಾಧೀನ ಮೇಲಾಧಿಕಾರಿಗಳ ನ್ಯಾಯಾಲಯದಲ್ಲಿ ಆದೇಶವಾಗಿದೆ ಎನ್ನುವುದು ನನಗೆ ಗೊತ್ತಿಲ್ಲ. ಸ.ನಂ.90/9 ರ ಜಮೀನಿನ ಪರಿಹಾರದ ಸಂಬಂಧ ನನ್ನ ಮತ್ತು ಪ್ರತಿವಾದಿ ನಡುವೆ ಭೂ ಸ್ವಾಧೀನ ಮೇಲಾಧಿಕಾರಿಗಳ ನ್ಯಾಯಾಲಯದಲ್ಲಿ ವ್ಯಾಜ್ಯ ನಡೆದಿದೆ ಎನ್ನುವುದು ಸರಿ. ಸದರಿ ವ್ಯಾಜ್ಯ ನನ್ನಂತೆ ಆಗಿದ್ದು ಸ.ನಂ.90/9 ರ ಜಮೀನು ಮುಳುಗಡೆ ಪರಿಹಾರದ ಹಣವನ್ನು ನನಗೆ ಕೊಡಬೇಕು ಎಂದು ಆದೇಶ ಆಗಿದೆ ಎಂದರೆ ಸರಿ. ಭೂ ಸ್ವಾಧೀನ ಮೇಲಾಧಿಕಾರಿಗಳ ನ್ಯಾಯಾಲಯದಲ್ಲಿ ನನ್ನಂತೆ ಆಗಿರುವ ಆದೇಶ ಸರಿಇಲ್ಲವೆಂದು ಪ್ರತಿವಾದಿ ಚಿಂಚೋಳಿಯ ಮಾನ್ಯ ಹಿರಿಯ ಶ್ರೇಣಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದು ಸದರಿ ಅರ್ಜಿಯನ್ನು ಮಾನ್ಯ ನ್ಯಾಯಾಲಯ ಪುರಸ್ಕರಿಸಿದೆ ಎನ್ನುವುದು ನನಗೆ ಗೊತ್ತಿಲ್ಲ. ಚಿಂಚೋಳಿಯ ಮಾನ್ಯ ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ನನ್ನ ಮತ್ತು ಪ್ರತಿವಾದಿ ನಡುವೆ ನಡೆದ ಸದರಿ ಪ್ರಕರಣ ಸಂಖ್ಯೆ ಎಲ್.ಎ.ಸಿ.131/2009 ಆಗಿತ್ತು ಎಂದರೆ ಸರಿ.

ಸ.ನಂ.90/9 ರ ಜಮೀನಿಗೆ ಭೂ ಸ್ವಾಧಿನ ಅಧಿಕಾರಿಗಳು ನನ್ನ ಹೆಸರಿಗೆ ವಿತರಿಸಲು ಆದೇಶಿಸಿದ ಪರಿಹಾರದ ಹಣ ಕಡಿಮೆಯಾಗಿದ್ದರಿಂದ ನಾನು ಸದರಿ ಅಧಿಕಾರಿಗಳ ಆದೇಶದ ವಿರುದ್ಧ ಚಿಂಚೋಳಿಯ ಮಾನ್ಯ ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಎಲ್.ಎ.ಸಿ.ಸಂಖ್ಯೆ 160/2009 ರಂತೆ ಪರಿಶೀಲನಾ ಅರ್ಜಿ ಸಲ್ಲಿಸಿದ್ದೆ ಎಂದರೆ ಸರಿ. ಸದರಿ ಅರ್ಜಿ ನನ್ನಂತೆ ಆಗಿದ್ದು ಎಕರೆಗೆ ತಲಾ ರೂ.1,60,000/- ಕೊಡುವಂತೆ ಆದೇಶ ಆಗಿತ್ತು ಎಂದರೆ ಸರಿ. ನನ್ನ ಪರವಾಗಿ ಆಗಿದ್ದ ಸದರಿ ಆದೇಶವನ್ನು ಸರ್ಕಾರದವರು ಗುಲ್ಬರ್ಗಾದ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿ ಮೇಲ್ಮನವಿ ಸಲ್ಲಿಸಿದ್ದರು ಎನ್ನುವುದು ನನಗೆ ಗೊತ್ತಿಲ್ಲ. ಸದರಿ ಮೇಲ್ಮನವಿ ಗುಲ್ಬರ್ಗಾದ 1 ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಲಯದಲ್ಲಿ ನಡೆದಿತ್ತು ಎನ್ನುವುದು ಸರಿ. ಸದರಿ ಮೇಲ್ಮನವಿಯಲ್ಲಿ ಈ ದಾವೆಯ ಪ್ರತಿವಾದಿ ಪಕ್ಷಗಾರನಾಗಿ ಸೇರ್ಪಡೆಗೊಂಡಿದ್ದ ಮತ್ತು ಆತ ಸಲ್ಲಿಸಿದ್ದ ಪ್ರತಿ ಮೇಲ್ಮನವಿಯು ಪುರಸ್ಕಾರಗೊಂಡು ಸ.ನಂ.90/9 ರ ಜಮೀನಿನ ಪ್ರತಿ ಎಕರೆಗೆ ರೂ.3 ಲಕ್ಷಕ್ಕಿಂತ ಹೆಚ್ಚಿನ ಪರಿಹಾರದ ಹಣ ಕೊಡಬೇಕೆಂದು ಸರ್ಕಾರದ ವಿರುದ್ಧ ಆದೇಶವಾಗಿತ್ತು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ.

ದಾವಾ ಸರ್ವೆ ನಂಬರನ ಸಂಬಂಧ ಈಗಾಗಲೆ ಭೂ ಸ್ವಾಧೀನಾಧಿಕಾರಿಗಳು ಮತ್ತು ನ್ಯಾಯಾಲಯಗಳ ಮುಂದೆ ನಡೆದಿರುವ ಪ್ರಕರಣಗಳಲ್ಲಿ ಸದರಿ ಸರ್ವೆ ನಂಬರನಲ್ಲಿರುವ ಪ್ರತಿ ಎಕರೆ ಜಮೀನಿಗೆ ತಲಾ 3 ರಿಂದ 5 ಲಕ್ಷಗಳ ವರೆಗೆ ಪರಿಹಾರ ಘೋಷಣೆ ಆಗಿದ್ದು, ದಾವಾ ಸ್ವತ್ತಿನ ಮೌಲ್ಯವು ಸಹ 5 ಲಕ್ಷಕ್ಕಿಂತ ಮೇಲ್ಪಟ್ಟು ಇದೆ ಎಂದರೆ ಸಾಕ್ಷಿ ನನಗೆ ಆ ಬಗ್ಗೆ ತಿಳುವಳಿಕೆ ಇಲ್ಲ ಎನ್ನುತ್ತಾರೆ.

ದಾವಾ ಸ್ವತ್ತಿನ ಮೌಲ್ಯವು ಈ ನ್ಯಾಯಾಲಯದ ಆರ್ಥಿಕ ಅಧಿಕಾರ ವ್ಯಾಪ್ತಿಯನ್ನು ಮಿರಿದ್ದರೂ ಸಹ ದಾವಾ ಸ್ವತ್ತಿನ ಮೌಲ್ಯವನ್ನು ಉದ್ದೇಶಪೂರ್ವಕವಾಗಿ ಕಡಿಮೆ ತೋರಿಸಿ ಈ ದಾವೆ ಸಲ್ಲಿಸಿದ್ದೇನೆ ಮತ್ತು ಅದಕ್ಕೆ ಪೂರಕವಾಗಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿದ್ದೇನೆ ಎನ್ನುವುದು ಸರಿಯಲ್ಲ. ನಿಪಿ-1 ರ ದಾಖಲೆಯನ್ನು ಈ ದಾವೆಗಾಗಿ ಸೃಷ್ಟಿ ಮಾಡಿ ತಂದಿದ್ದೇನೆ ಎನ್ನುವುದು ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು,**
**ಚಿಂಚೋಳಿ**